# ಸಹಾಯಕಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ನಂ.ಕಂ.ಪಹಣಿ:ಅಪೀಲು:251/2013-14 ದಿನಾಂಕ:21.04.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**

**ಸಹಾಯಕ ಆಯುಕ್ತರು, ಹೊಸಪೇಟೆ**

*****

**ವಾದಿಗಳು: ಶ್ರೀ/ ಶ್ರೀಮತಿ**

1. ಬೂದನೂರು ಕನ್ನಳ್ಳಿ ಚೊಕ್ಕಪ್ಪ ತಂದೆ ಬೂದನೂರು ಕನ್ನಳ್ಳಿ ಗಿರಿಯಪ್ಪ,
2. ಬೂದನೂರು ಕನ್ನಳ್ಳಿ ಪ್ರೇಮಾನಂದ ತಂದೆ ಬೂದನೂರು ಕನ್ನಳ್ಳಿ ಗಿರಿಯಪ್ಪ,
3. ಬೂದನೂರು ಕನ್ನಳ್ಳಿ ಮೈಲಾರಪ್ಪ ತಂದೆ ಬೂದನೂರು ಕನ್ನಳ್ಳಿ ಗಿರಿಯಪ್ಪ
4. ಬೂದನೂರು ಕನ್ನಳ್ಳಿ ನೀಲಪ್ಪ ತಂದೆ ಬೂದನೂರು ಕನ್ನಳ್ಳಿ ಗಿರಿಯಪ್ಪ

**ಮೇಲಿನ ಎಲ್ಲರ ವಾಸ:** ಹನುಮಗೊಂಡನಹಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಶ್ರೀನಿವಾಸ.ಎಂ.ಎಸ್., ವಕೀಲರು, ಹಗರಿಬೊಮ್ಮನಹಳ್ಳಿ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ದಿ|| ಹೇಮಕ್ಕ ಗಂಡಡಾರ್ಲಿಂಗಪ್ಪ

1ಎ] ಮಹಾದೇವಕ್ಕ ಗಂಡ ನಾಗಪ್ಪ **ವಾಸ**: ಡಣಾಪುರ ಗ್ರಾಮ, ಎಂ.ಎಂ.ಹಳ್ಳಿ, ಹೊಸಪೇಟೆ

1ಬಿ] ಮಹಾದೇವಪ್ಪ ತಂದೆ ಡಾರ್ಲಿಂಗಪ್ಪ **ವಾಸ**: ಹನುಮಗೊಂಡನಹಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾಲೂಕು,

1ಸಿ] ಚನ್ನಬಸಮ್ಮ ಗಂಡ ಮಲ್ಲಪ್ಪ **ವಾಸ:** ಸಿದ್ದಾಪುರ ಗ್ರಾಮ, ಗಂಗಾವತಿ ತಾಲೂಕು ಕೊಪ್ಪಳ ಜಿಲ್ಲೆ

1ಡಿ] ಮಲ್ಲಿಕಾರ್ಜುನ ತಂದೆ ಡಾರ್ಲಿಂಗಪ್ಪ

1ಇ] ಅಕ್ಕಮ್ಮ ಗಂಡ ಪತ್ರಪ್ಪ,

1ಎಫ್] ಕೋಟೆಪ್ಪ ತಂದೆ ಡಾರ್ಲಿಂಗಪ್ಪ

1ಜಿ] ಪರಮೇಶ್ವರಪ್ಪ ತಂದೆ ಡಾರ್ಲಿಂಗಪ್ಪ

**[ಪ್ರತಿವಾದಿ-1ಡಿ ರಿಂದ 1ಜಿ ರವರಿಗೆವಾಸ: ಹನುಮಗೊಂಡನಹಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾ||]**

2] ಗಂಗಮ್ಮ ಗಂಡ ಗಿರೀಶ

3] ಸಂಗಪ್ಪ ತಂದೆ ಚೊಕ್ಕಪ್ಪ ಇವರ ಪೋತಿ ವಾರಸುದಾರರು

3ಎ] ನಿಂಗಪ್ಪ ತಂದೆ ಸಂಗಪ್ಪ,

3ಬಿ] ಮಹಾದೇವಕ್ಕ ತಂದೆ ಸಂಗಪ್ಪ,

3ಸಿ] ಮಹಾದೇವಪ್ಪ ತಂದೆ ಸಂಗಪ್ಪ,

3ಡಿ] ಗಂಗಮ್ಮ ತಂದೆ ಸಂಗಪ್ಪ,

**ಪ್ರತಿವಾದಿ-2&3ಎ ರಿಂದ 3ಡಿ ರವರ ವಾಸ:** ಹನುಮಗೊಂಡನಹಳ್ಳಿ ಗ್ರಾಮ, ಹಗರಿಬೊಮ್ಮನಹಳ್ಳಿ ತಾ||, ಬಳ್ಳಾರಿ ಜಿಲ್ಲೆ.

**[ಪ್ರತಿವಾದಿಗಳ ಪರ ವಕೀಲರು ಶ್ರೀ ಬಿ.ಹೂಲಪ್ಪ, ವಕೀಲರು, ಹೊಸಪೇಟೆ.]**

4] ಉಪ ತಹಶೀಲ್ದಾರರು, ನಾಡಕಛೇರಿ, ಹಂಪಸಾಗರ

**ವ್ಯಾಜ್ಯದಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಗರಿಬೊಮ್ಮನಹಳ್ಳಿ | ಹಂಪಸಾಗರ | ಹನುಮಗೊಂಡನಹಳ್ಳಿ | 436 | 10ಎಕರೆ94 ಸೆಂಟ್ಸ್ |

**ಪೀಠಿಕೆ:-**

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ ಹನುಮಗೊಂಡನಹಳ್ಳಿ ಗ್ರಾಮದಸ.ನಂ.436 ವಿಸ್ತೀರ್ಣ: 10 ಎಕರೆ 94 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಪ ತಹಶೀಲ್ದಾರರು, ಹಂಪಸಾಗರ ಇವರ ನ್ಯಾಯಾಲಯದಆದೇಶ ಸಂಖ್ಯೆ: ಸಂ/ಕಂ/ನಾಕ/ಪಹಣಿ/ವಿವಾದ/80/2012-13ದಿನಾಂಕ:29.05.2013 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ವಾದಿಗಳು ಮೇಲ್ಮನವಿಯನ್ನು ದಿನಾಂಕ:18.03.2014 ರಂದು ಸಲ್ಲಿಸಿರುತ್ತಾರೆ.

ವಾದಿಗಳು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:10.06.2014 ಕ್ಕೆ ನಿಗಧಿಪಡಿಸಿ ಉಭಯ ಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳ ಪ್ರಕಾರ ಸದರಿ ವ್ಯಾಜ್ಯದ ಜಮೀನು ಮೂಲತ: ಶ್ರೀ ಬೂದನೂರು ಚೊಕ್ಕಪ್ಪ ಇವರಿಗೆ ಸೇರಿದ್ದು, ಇವರು ವಾದಿ ಮತ್ತು ಪ್ರತಿವಾದಿಗಳ ತಾತನಾಗಿದ್ದು ಇವರ ಮರಣಾನಂತರ 1984 ರಂದು ವಾದಿಗಳ ತಾಯಿ ಹಾಗೂ ಪ್ರತಿವಾದಿಗಳಾದ ಡಾಲಿಂಗಪ್ಪ(ಪ್ರತಿವಾದಿ-1ಎ ರಿಂದ 1ಜಿ), ಪ್ರತಿವಾದಿ-2 ರವರಗಂಡ(ಗಿರೀಶಪ್ಪ)ನ ಹೆಸರಿಗೆ, ಹಾಗೂ ಪ್ರತಿವಾದಿ-3 ರವರಾದ ಸಂಗಪ್ಪ ತಂದೆ ಚೊಕ್ಕಪ್ಪ ಇವರ ಹೆಸರಿನಲ್ಲಿ ಪಾಲು ವಿಭಾಗವಾಗಿದ್ದು, ಆ ಪ್ರಕಾರವಾಗಿ ಸದರಿ ವ್ಯಾಜ್ಯದ ಜಮೀನುಗಳು ವಾದಿಗಳ ತಾಯಿಯ ಪಾಲಿಗೆ ಬಂದಿದ್ದು, ಎಂ.ನಂ.19/1984-85 ರಲ್ಲಿ ಹಕ್ಕು ಬದಲಾವಣೆಯಾಗಿರುವುದಾಗಿ, 2007 ರವೆಗೂ ಗಂಗಮ್ಮ ಇವರ ಹೆಸರಿನಲ್ಲಿಯೇ ಸದರಿ ಪಹಣಿ ಇರುವುದರಿಂದ, ಇವರ ಮರಣಾನಂತರ ವಾದಿಗಳು ತಮ್ಮ ಹೆಸರಿನಲ್ಲಿಯೇ ಹಕ್ಕು ಬದಲಾವಣೆ ಮಾಡಲು ಹಾಗೂ ಪ್ರತಿವಾದಿ-4 ರವರ ಆದೇಶವನ್ನು ತಳ್ಳಿಹಾಕಲು ಮನವಿ ಮಾಡಿಕೊಂಡಿರುತ್ತಾರೆ.

ಪ್ರತಿವಾದಿಗಳ ಪರ ವಕೀಲರ ಪ್ರಕಾರ ವಾದಿಗಳು ಹಾಗೂ ಪ್ರತಿವಾದಿಗಳು ಚೊಕ್ಕಪ್ಪ ಇವರ ಕಾನೂನುಬದ್ಧ ವಾರಸುದಾರರಾಗಿದ್ದು, ಉಭಯ ಪಕ್ಷಗಾರರು ಸದರಿ ವ್ಯಾಜ್ಯದ ಜಮೀನುಗಳಲ್ಲಿ ಸ್ವಾಧೀನಾನುಭವವನ್ನು ಹೊಂದಿರುವುದಾಗಿ, ವಾದಿಗಳ ತಂದೆಯವರು ಜೇಷ್ಠ ಪುತ್ರನಾಗಿದ್ದರಿಂದ ಇವರ ಹೆಸರೇ 1967 ರಿಂದ ಕಂದಾಯ ದಾಖಲೆಗಳಲ್ಲಿ ನಮೂದಾಗಿದ್ದು, ನಂತರದಲ್ಲಿ ಇವರ ಹೆಂಡತಿ ಗಂಗಮ್ಮ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಿಸಿಕೊಂಡಿರುವುದಾಗಿ, ಚೊಕ್ಕಪ್ಪ ಇವರ ಮರಣಾನಂತರ ಇವರ ಮಕ್ಕಳಾದ ಗಿರಿಯಪ್ಪ, ಡಾಲಿಂಗಪ್ಪ, ಗಿರಿಶಪ್ಪ ಮತ್ತು ಸಂಗಪ್ಪ ಇವರುಗಳ ಜಂಟೀ ಕುಟುಂಬದ ಆಸ್ತಿಗಳನ್ನು ಸಾಗುವಳಿ ಮಾಡಿದ್ದರಿಂದ ಬಂದಂತಹ ಆದಾಯದಿಂದ ಸುಮಾರು 50 ಎಕರೆ ಭೂಮಿಯನ್ನು ಖರೀದಿಸಿದ್ದು, ಸದರಿ ವ್ಯಾಜ್ಯದ ಜಮೀನುಗಳು ಜಂಟೀ ಕುಟುಂಬದ ಆಸ್ತಿಯಾಗಿರುತ್ತವೆಂದು, ದಿನಾಂಕ:19.01.1964 ರಂದು ಚೊಕ್ಕಪ್ಪನ ನಾಲ್ಕು ಜನ ಮಕ್ಕಳು ಸೇರಿ ಪಾಲು ವಿಭಾಗ ಮಾಡಿಕೊಂಡಿದ್ದು, ಸದರಿ ವ್ಯಾಜ್ಯದ ಜಮೀನುಗಳಲ್ಲಿ ಪ್ರತಿವಾದಿಗಳಿಗೂ ಸಹ ಪಾಲು ಇರುವುದಾಗಿ ತಿಳಿಸಿರುತ್ತಾರೆ.

ಆದರೆ ದಿನಾಂಕ:15.03.2016 ರಂದು ವಿಚಾರಣೆ ಸಂದರ್ಭದಲ್ಲಿ ವಾದಿಗಳ ಪರ ವಕೀಲರು ಹಾಜರಾಗಿ ವಾದಿಗಳ ತಂದೆಯು ಸದರಿ ಜಮೀನನ್ನು ನೋಂದಾಯಿತ ಕ್ರಯ ದಸ್ತಾವೇಜಿನ ಮೂಲಕ ಪಡೆದಿರುವುದಾಗಿ ತಿಳಿಸಿದ್ದು, ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಲಾಗಿ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ನೋಂದಾಯಿತವಲ್ಲದ ಪಾಲು ವಿಭಾಗ ಪತ್ರದ ಆಧಾರದ ಮೇಲೆ ಕ್ರಮ ಜರುಗಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಬಾರದೇ ಇರುವುದರಿಂದ, ಹಾಗೂ ಸದರಿ ಪಾಲು ವಿಭಾಗ ಪತ್ರವು ಕಾಲಮಿತಿ ಮೀರಿರುವುದರಿಂದ ಪಾಲು ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ ಸದರಿ ಪ್ರಕರಣವು ಸಿವಿಲ್ ಸ್ವರೂಪದ್ದಾಗಿ ಕಂಡುಬಂದಿರುವುದರಿಂದ ಈ ಕೆಳಕಂಡಂತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಸುತ್ತಾ,** ಉಭಯ ಪಕ್ಷಗಾರರು ನೋಂದಾಯಿತವಲ್ಲದ ಪಾಲು ವಿಭಾಗ ಪತ್ರಕ್ಕೆ ಸಂಬಂಧಿಸಿದಂತೆ ತಮ್ಮ ಹಕ್ಕಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳುವಂತೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:21.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

**[ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]**
**ಸಹಾಯಕ ಆಯುಕ್ತರು,**
**ಹೊಸಪೇಟೆ**

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು:-**

1. ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

29/4/16